


# ಕನಸು

(ಅಮೆರಿಕದ ಕತೆಗಾರ ಓ .ಹೆನ್ರಿ(1862–1910) ತನ್ನ ಕತೆಗಾರಿಕೆಯ ಒಟ್ಟೂ ಹದಿನಾರು ವರ್ಷಗಳಲ್ಲಿ 300ಕ್ಕೂ ಹೆಚ್ಚು ಸಣ್ಣ ಕತೆಗಳನ್ನು ಬರೆದಿದ್ದಾನೆ. ಓ. ಹೆನ್ರಿಯ ಕೊನೆಯ ಕತೆ 'ಕನಸು'. ಇದನ್ನು ಬರೆಯುತ್ತಿರುವಾಗಲೇ ಅವನು ತೀರಿಕೊಂಡ. ಅವನ ಮೇಜಿನ ಮೇಲೆ ಅಪೂರ್ಣವಾಗಿ ಬಿದ್ದುಕೊಂಡಿದ್ದ ಈ ಕತೆಯನ್ನು ಕೂಡಲೆ ಅಮೆರಿಕದ ಪತ್ರಿಕೆ 'ಕಾಸ್ಮೊಪಾಲಿಟನ್' ಪ್ರಕಟಿಸಿತು. ಅಪೂರ್ಣವೊಂದೇ ಅಲ್ಲ, ಅಪೂರ್ವವೂ ಆಗಿರುವ ಈ ಕತೆ ಇಂದಿಗೂ ಕೂಡ ಕುತೂಹಲದಿಂದ ಓದಿಸಿಕೊಳ್ಳುತ್ತದೆ. ಕತೆಯ ಜೊತೆಗೆ ಅವನು ಮಾಡಿಟ್ಟುಕೊಂಡಿದ್ದ ಟಿಪ್ಪಣಿಯೂ ಸೇರಿ ಕತೆಯ ಪೂರ್ಣ ಚಿತ್ರ ಸಿಗುತ್ತದೆ. ಈ ಅನುವಾದ ಅವನ ಕತೆ ಹಾಗೂ ಟಿಪ್ಪಣಿಯನ್ನು ಒಳಗೊಂಡಿದೆ. ಜಗತ್ತಿನ ಕಥಾಸಾಹಿತ್ಯದಲ್ಲಿ ಇದೊಂದು ಅಪರೂಪದ ವಿದ್ಯಮಾನ).